ವಿಜಯ ಕರ್ನಾಟಕ

ಶಿವಮೊಗ್ಗ | Mar 1, 2013, 12.22AM IST

# ವಿಜ್ಞಾನ ಎಲ್ಲರೂ ಸಂತಸ ಪಡುವ ಸಾಧನ



**ಹೊಳೆಹೊನ್ನೂರು ಸಮೀಪದ ಜಾವಳ್ಳಿಯ ಜ್ಞಾನದೀಪ ಶಾಲೆಯಲ್ಲಿ ನಿರ್ಮಿಸಿರುವ ಆಕಾಶಕಾಯಗಳ ವೀಕ್ಷಣ ಕೇಂದ್ರವನ್ನು ರಾಮನ್ ಸಂಶೋಧನಾ ಕೇಂದ್ರದ ಹಿರಿಯ ಪ್ರಾಧ್ಯಾಪಕ ಉದಯಶಂಕರ್ ಉದ್ಘಾಟಿಸಿದರು.**

**ಹೊಳೆಹೊನ್ನೂರು:** ವಿಜ್ಞಾನ ಕೇವಲ ಅಂಕಗಳಿಸುವುದಲ್ಲ, ನಮ್ಮ ಪರಿಸರವೂ ವಿಜ್ಞಾನವಾಗಿದೆ ಎಂದು ಬೆಂಗಳೂರಿನ ರಾಮನ್ ಸಂಶೋಧನಾ ಕೇಂದ್ರದ ಹಿರಿಯ ಪ್ರಾಧ್ಯಾಪಕ ಉದಯಶಂಕರ್ ಅಭಿಪ್ರಾಯಪಟ್ಟರು.

ಸಮೀಪದ ಜಾವಳ್ಳಿಯ ಜ್ಞಾನದೀಪ ಶಾಲೆ ಆವರಣದಲ್ಲಿ ನಿರ್ಮಿಸಿರುವ ಆಕಾಶಕಾಯಗಳ ವೀಕ್ಷಣಾ ಕೇಂದ್ರವನ್ನು ವಿಜ್ಞಾನ ದಿನಾಚರಣೆ ಅಂಗವಾಗಿ ಗುರುವಾರ ಸಂಜೆ ಉದ್ಘಾಟಿಸಿ ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಜ್ಞಾನ ಎಲ್ಲರೂ ಸಂತಸ ಪಡುವ ಸಾಧನವಾಗಿದೆ. ಇಂದು ವಿಶ್ವರೂಪ ದರ್ಶನದಲ್ಲಿ ಆಧುನಿಕ ತಂತ್ರಜ್ಞಾನ ಬಳಕೆ ಉತ್ತಮ ಸಹಕಾರಿಯಾಗಿದೆ. ವಿಜ್ಞಾನಿ ಸಿ.ವಿ.ರಾಮನ್ ಅವರು ಬಳಸಿದ ಟೆಲಿಸ್ಕೋಪ್ ಅನ್ನು ಶಾಲೆ ಆವರಣ ದಲ್ಲಿ ಅಳವಡಿಸಿರುವುದು ಮಕ್ಕಳಿಗೆ ಪ್ರಾಯೋಗಿ ಕವಾಗಿ ವಿಶ್ವ ರೂಪದ ದರ್ಶನದೊಂದಿಗೆ ಶಿಕ್ಷಣ ಪಡೆಯಲು ಪ್ರಯೋಜನವಾಗಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದು ಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ವಿ.ದೇವೇಂದ್ರ ಮಾತನಾಡಿ, ಇತ್ತೀಚೆಗೆ ವಿಜ್ಞಾನದಲ್ಲಿ ಆಸಕ್ತಿ ಕಡಿಮೆಯಾಗುತ್ತಿದೆ. ಇಂಥ ಮನಸ್ಥಿತಿಗಳು ಬದಲಾಗಬೇಕು ಎಂದರು. ಶಾಲೆಯಲ್ಲಿ ಪ್ಲಾನಿಟೋರಿಯಂ ಸ್ಥಾಪಿಸುವ ಉದ್ದೇಶ ಹೊಂದಲಾಗಿದೆ ಎಂದು ಹೇಳಿದರು.

ಸರ್.ಸಿ.ವಿ.ರಾಮನ್ ಅವರ ಟೆಲಿಸ್ಕೋಪ್ ತಂದು ನಿರ್ಮಿಸಲು ಸಹಕರಿಸಿದ ರಾಮನ್ ಸಂಶೋಧನಾ ಕೇಂದ್ರದ ಆಡಳಿತಾಧಿಕಾರಿ ಕೆ.ಕಷ್ಣಮರಾಜು, ಮೆಕ್ಯಾನಿಕ್ ವಿ.ದಾಮೋದರ್, ಕೆ.ಗೋಪಾಲ್, ಕೆ. ಆನಂದ್, ಆರ್.ಶಿವಶಕ್ತಿ, ಪಿ.ರವಿ ಅವರನ್ನು ಸನ್ಮಾನಿಸಲಾಯಿತು.

ಸಂಪನ್ಮೂಲ ವ್ಯಕ್ತಿ ರಾಮ್‌ಕುಮಾರ್ ಅಧಿತಿಗಳ ಪರಿಚಯ ಮಾಡಿದರು. ಶಿಕ್ಷಕ ವಾಸುದೇವ್ ವಿಜ್ಞಾನ ದಿನಾಚರಣೆಯ ವಿವರಣೆ ನೀಡಿದರು.

ಸಂಸ್ಥೆ ಆಡಳಿತಾಧಿಕಾರಿ ಮಧು, ಖಜಾಂಚಿ ಡಾ.ಶ್ರೀಧರ್, ಆಡಳಿತ ಮಂಡಳಿ ಸದಸ್ಯ ತಾಜುದ್ದೀನ್, ಪ್ರಾಂಶುಪಾಲ ಕೆ.ನಾಗರಾಜ್, ಮುಖ್ಯ ಶಿಕ್ಷಕರಾದ ವಾಣಿ ಮತ್ತಿತರರು ಹಾಜರಿದ್ದರು. ಪ್ರಾಂಶುಪಾಲ ಶ್ರೀಕಾಂತ್ ಎಂ.ಹೆಗಡೆ ಸ್ವಾಗತಿಸಿ, ವಿದ್ಯಾರ್ಥಿನಿಯರಾದ ಹಂಸ, ಗೌತಮಿ ನಿರೂಪಿಸಿದರು. ಉಪ ಪ್ರಾಂಶುಪಾಲ ರೆಜಿ ಜೋಸೆಫ್ ವಂದಿಸಿದರು.